**ಇಂದು ದಿನಾಂಕ 19.06.2025 ರಂದು ಪಿಡಬ್ಲ್ಯೂ -2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ವಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ದಾವಾ ಆಸ್ತಿ ಸರ್ವೆ ನಂ.195/1. ವಾದಿ ಮತ್ತು ಪ್ರತಿವಾದಿಯ ಮಕ್ಕಳು ಗೊತ್ತಿಲ್ಲ ಎಂದರೆ ಸರಿಯಲ್ಲ. ಮುನಿರಾಜು ಜಮೀನು ನೋಡಲು ಬರುತ್ತಿದ್ದರು. ಆದ ಕಾರಣ ಪರಿಚಯ. ಮುನಿರಾಜುರವರ ಜೊತೆಯಲ್ಲಿ ಹೋದಾಗ ಪ್ರತಿವಾದಿಗಳ ಪರಿಚಯವಾಯಿತು. ಮುನಿರಾಜುರವರ ಮನೆಗೆ ನಾನು 2019 ಜುಲೈನಲ್ಲಿ ಹೋದೆನು. ಮುನಿರಾಜುರವರಿಗೆ ರೂ.15 ಲಕ್ಷಕ್ಕೆ ಚೆಕ್ ನ್ನು ಕೊಟ್ಟರು. ಮುನಿತಾಯಮ್ಮನಿಗೆ ರೂ.5 ಲಕ್ಷಕ್ಕೆ ಚೆಕ್‌ನ್ನು ಕೊಟ್ಟರು. ಅವರ ಮನೆಯಲ್ಲೇ ಕೊಟ್ಟರು. ದಿನಾಂಕಃ05.08.2019 ರಲ್ಲಿ ಕರಾರು ಆಯಿತು. ಆಗಲೇ ಆ ಹಣವನ್ನು ಕೊಟ್ಟರು. ಕರಾರು ಆದ ದಿನ ನಾವು, ರಾಮಚಂದ್ರಪ್ಪನ ಮಗ, ಚೆನ್ನಪ್ಪ ಮತ್ತು ಪ್ರತಿವಾದಿಯವರ ಕುಟುಂಬದವರು ಇದ್ದರು. ಕರಾರನ್ನು ಮುನಿರಾಜುರವರೆ ತಯಾರು ಮಾಡಿಸಿದರು. ಪ್ರತಿವಾದಿಗಳಿಗೆ ಹಣದ ಅವಶ್ಯಕತೆ ಇದ್ದ ಕಾರಣ ನಾನು ವಾದಿಯರ ಹತ್ತಿರ ಕರೆದುಕೊಂಡು ಹೋಗಿ ಹಣವನ್ನು ಕೊಡಿಸಿದ್ದೇನೆ ಎಂದರೆ ಸುಳ್ಳು. ಭದ್ರತೆಗೋಸ್ಕರ ಕರಾರನ್ನು ಮಾಡಿಕೊಂಡಿದ್ದೇನೆ ಎಂದರೆ ಸುಳ್ಳು. ಕರಾರಿಗೆ ಎಲ್ಲರೂ ಸಹಿ ಹಾಕಿದ ನಂತರ ನಾನು ಸಹಿ ಮಾಡಿದೆನು. ಕರಾರು ರೂ.90 ಲಕ್ಷಕ್ಕೆ ಆಗಿದೆ. Advance ಆಗಿ ರೂ.30 ಲಕ್ಷ ಮತ್ತು ಡಿಸೆಂಬರ್‌ನಲ್ಲಿ ರೂ.10 ಲಕ್ಷ ಚೆಕ್‌ನ್ನು ಕೊಟ್ಟರು. ಡಿಸೆಂಬರ್‌ನಲ್ಲಿ ಕೊಟ್ಟ ಹಣದ ಬಗ್ಗೆ ಷರಾವನ್ನು ನಾನೇ ಬರೆದಿದ್ದೇನೆ. ಅದರಲ್ಲಿ ನಾನು ಸಹಿ ಮಾಡಿದ್ದೇನೋ ಇಲವೋ ನೆನಪಿಲ್ಲ. ಸಾಲದ ಭದ್ರತೆಗೆ ದಾಖಲೆ ಮಾಡಿಸಿ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**